# ನಾನು ಕಂಡಂತೆ– ಶ್ರೀ ರಾಘವೇಂದ್ರ ಪಾಟೀಲ

೫೦ನೇ ದಶಕದಲ್ಲಿ ನಾಣು ಲಕ್ಷ್ಮೀಶ ಕವಿಯ ಹುಟ್ಟೂರಾದ ಕಡೂರು ತಾಲ್ಲೂಕು ದೇವನೂರಿನಲ್ಲಿ ಉಪಾಧ್ಯಾಯವಾಗಿ ಇದ್ದೆ. ಆ ದಿನಗಳಲ್ಲಿ ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಸ್ಥಾಪಕರಾದ ಶ್ರೀ ರಾಘವೇಂದ್ರ ಸ್ವಾಮಿಗಳು ಮತ್ತು ಶ್ರೀ ಸೂರದಾಸ್‌ರವರು ದೇವನೂರಿಗೆ ಭಿಕ್ಷಾಟನೆಗಾಗಿ ಬಂದಿದ್ದರು. ಅಂದಿನಿಂದ ಅವರ ಸಹವಾಸ ಸನ್ನಿವೇಶದಿಂದ ನನ್ನ ಜೀವನದಲ್ಲಿ ಒಂದು ಧನ್ಯತೆಯ ಛಾಪು ಮೂಡಿತು. ಆಗಾಗ ಮಲ್ಲಾಡಿಹಳ್ಳಿಗೆ ಹೋಗಿ ಬರುವುದು ನನ್ನ ಹವ್ಯಾಸವಾಯಿತು.

ಆ ದಿನಗಳಲ್ಲಿ ಅನಾಥ ಸೇವಾಶ್ರಮದ ವಿಜ್ಞಾನ ವಿಭಾಗದ ಅಧ್ಯಾಪಕರಾಗಿದ್ದ ಶ್ರೀ ರಾಘವೇಂದ್ರ ಪಾಟೀಲ್ ಅವರ ಪರಿಚಯ ಆಗಿ, ಅವರ ಮನೆಯಲ್ಲೇ ತಂಗುವ ಅವಕಾಶ ಸಿಕ್ಕಿತು. ಅವರು ಕೇವಲ ಅಧ್ಯಾಪಕರಲ್ಲದೇ ಉತ್ತಮ ಚಿಂತನಕಾರರು ಸಾಹಿತ್ಯಾಸಕ್ತರು ಆಗಿದ್ದರು. ಇವರ ಸಹವಾಸ ನನಗೆ ಸಂತೋಷ ಕೊಟ್ಟಿತು. ಸಂಜೆ ವೇಳೆ ಆಶ್ರಮದಿಂದ  ಹೊರ ಬಯಲಿಗೆ ನಡೆದು ರಾತ್ರಿ ಏಳರವರೆಗೆ ಏನೇನೂ ವಿಚಾರಗಳನ್ನು ಚರ್ಚಿಸುವ , ಮಥಿಸುವ ಅವಕಾಶವೂ ಸಿಕ್ಕಿತು. ಅವರ ಲೇಖನಗಳ ಕಿರು ಪರಿಚಯವೂ ಆಯಿತು. ಆ ವಿಚಾರಗಳನ್ನು ಕುರಿತು ಅವರ ಬಾಯಿಂದ ಅರ್ಧ– ಮುಕ್ಕಾಲು ಗಂಟೆಯ ಒಂದು ಬಗೆಯ ಉಪನ್ಯಾಸವೆಂಬಂತೆ ಕೇಳಿ ಸಂತೋಷ ಪಟ್ಟವನು ನಾನು.ಒಂದೊಂದು ಬಾರಿ ನನ್ನ ರಚನೆಯಳನ್ನು ಕುರಿತು, ಅವರ ಅಭಿಲಾಷೆಯಂತೆ, ನನ್ನಿಂದಲೂ ಕಿರು ಉಪನ್ಯಾಸಗಳು ಬರುತ್ತಿದ್ದವು. ಅನಂತರದಲ್ಲಿ ಆಯಾ ವಿಷಯಗಳನ್ನು ಕುರಿತ ಚರ್ಚೆಗಳು ವಿಮರ್ಶೆಗಳು ನಡೆದು ನನ್ನ ಅವರ ಸ್ನೇಹ ಒಂದು ರೀತಿಯ ಬಾಂಧವ್ಯವನ್ನೇ ಹುಟ್ಟಿಸಿತು.

ಇತ್ತೀಚಿನ ದಿನಗಳಲ್ಲಿ ಅವರಿಂದ ರಚಿತವಾದ ಹಲವಾರು ವೈಚಾರಿಕ ಪುಸ್ತಕಗಳು ಹೊರಬಂದವು. ಅವುಗಳನ್ನು ಓದಿ ಸುಖಿಸಿದ್ದೇನೆ. ಒಮ್ಮೆಯಂತೂ ಶ್ರೀ ಮುಕುಂದೂರು ಸ್ವಾಮಿಗಳ ಪರಿಚಯವನ್ನು ಸುಧೀರ್ಘವಾಗಿ ಪಾಟೀಲರ ಮುಂದೆ ಇಟ್ಟೆನು. ಅದರಿಂದ ಬಹಳ ಪ್ರಚೋದಿತರಾದ ಪಾಟೀಲರು ಅದೆಲ್ಲವನ್ನೂ ಸೇರಿಸಿ ಒಂದು ಪುಸ್ತಕವನ್ನು ಹೊರತರಬೇಕೆಂದು ಮತ್ತೆ ಮತ್ತೆ ನನ್ನ ಮೇಲೆ ಒತ್ತಡ ತಂದರು. ಅಂತೂ –ಇಂತೂ ಆ ಪುಸ್ತಕ "ಯೇಗ್ದಾಗೆಲ್ಲಾ ಐತೆ" ಎಂಬ ಹೆಸರಿನಿಂದ ಹೊರ ಬಂದು ತುಂಬಾ ಜನಪ್ರಿಯವಾಗಿ ಹದಿನೈದು ಪುನರ್– ಮುದ್ರಣಗಳನ್ನು ಕಂಡಿತು. ಇದಕ್ಕೆಲ್ಲಾ ಸೋದರ ಶ್ರೀ ರಾಘವೇಂದ್ರ ಪಾಟೀಲ್‌ರವರ ಒತ್ತಡವೇ ಕಾರಣ. ಅವರಿಗೆ ನಾನು ಕೃತಜ್ಞ.

ಶ್ರೀ ರಾಘವೇಂದ್ರ ಸ್ವಾಮಿಗಳು ದೇಹತ್ಯಾಗ ಮಾಡಿದ ಮೇಲೆ ಅವರು ಸ್ಥಾಪಿಸಿದ ಅನಾಥಾಶ್ರಮವು ಅನಾಥವಾಗುವ ಪರಿಸ್ಥಿತಿ ಮೂಡಿತು. ಆಗ ಶ್ರೀ ರಾಘವೇಂದ್ರ ಪಾಟೀಲರು ದಿಟ್ಟತನದಿಂದ ಅದನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ

ಹೊತ್ತು ನಿಂತರು. ತಮ್ಮ ಹುಟ್ಟೂರಿನಲ್ಲಿ ವಿಶೇಷವಾದ ಆಸ್ತಿ–ಪಾಸ್ತಿ ವರಮಾನ ಇತ್ಯಾದಿಗಳ ಸೌಕರ್ಯ ಹೇರಳವಾಗಿದ್ದರೂ ಅದೆಲ್ಲವನ್ನೂ ಅಲ್ಲಿನ ಸಹೋದರರಿಗೆ ವಹಿಸಿಕೊಟ್ಟು ಮಲ್ಲಾಡಿಹಳ್ಳಿಯಲ್ಲಿಯೇ ನಿಂತು ಅಲ್ಲಿನ ಅನಾಥಸೇವಾಶ್ರಮವನ್ನು ಸರ್ವ ರೀತಿಯಿಂದಲೂ ಅಭಿವೃದ್ಧಿಗೊಳಿಸಿಕೊಂಡು ಹೋಗುತ್ತಿರುವುದು ಅವರ ವ್ಯಕ್ತಿತ್ವದ ವಿಶೇಷವಾಗಿದೆ. ಅಲ್ಲಿನ ನಾಲ್ಕಾರು ಸಾವಿರ ವಿದ್ಯಾರ್ಥಿಗಳಿಗೆ ವಸತಿ, ಆಟ– ಊಟ ಎಲ್ಲವನ್ನೂ ಉತ್ತಮ ರೀತಿಯಲ್ಲಿ ನಿರ್ವಹಿಸುತ್ತಿರುವುದು ಶ್ಲಾಘನೀಯ. ಅವರ ಉತ್ಸಾಹ ಸ್ವಲ್ಪವೂ ಕುಂದಿಲ್ಲ. ಇತ್ತೀಚಿನ ದಿನಗಳಲ್ಲಿ ನಾನು ಮಲ್ಲಾಡಿಹಳ್ಳಿಯ ಅನಾಥಾಶ್ರಮಕ್ಕೆ ಹೋದಾಗ ಅವರ ಕಾರ್ಯ ಚಟುವಟಿಕೆಗಳನ್ನು ಕಂಡು ಚಕಿತನಾಗಿದ್ದೇನೆ.

ಈಗ ಅವರು ತಮ್ಮ ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗುತ್ತಿರುವ ಸಮಯದಲ್ಲಿ ಅವರಿಗೆ "ಸನ್ಮಾನ ಗ್ರಂಥ"ವೊಂದನ್ನು ಅರ್ಪಿಸುತ್ತಿರುವುದು ಅತ್ಯಂತ ಉಚಿತವಾಗಿದೆ. ಅಲ್ಲಿನ ಅವರ ಮಿತ್ರರೆಲ್ಲರೂ ಈ ಕೆಲಸ ಮಾಡುತ್ತಿರುವುದು ಒಂದು ಶ್ಲಾಘನೀಯ ವಿಚಾರವಾಗಿದೆ. ಆ ಮಿತ್ರರೆಲ್ಲರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಶ್ರೀ ರಾಘವೇಂದ್ರ ಪಾಟೀಲರು ಇದೇ ಉತ್ಸಾಹದಿಂದ ತಮ್ಮ ಸಾಹಿತ್ಯ ಮತ್ತು ಸಮಾಜ ಸೇವೆಗಳನ್ನು ನೂರುಕಾಲ ಮುಂದುವರಿಸಲೆಂದು ಆಶಿಸುತ್ತೇನೆ. ಅವರ ಘನ ವ್ಯಕ್ತಿತ್ವಕ್ಕೆ ವಂದನೆಗಳು

–ಬೆಳಗೆರೆ ಕೃಷ್ಣಶಾಸ್ತ್ರಿ